ಮೂಲ ದಾವಾ ಸಂಖ್ಯೆ. 143/2013 ಪಿ ಡಬ್ಲ್ಯೂ 1

(ದಿನಾಂಕ 23-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್ ಎಸ್ ಪಿ ವಕೀಲರಿಂದಃ-

ನಾನು ಗ್ರಾಮ ಪಂಚಾಯ್ತಿಗೆ ಅರ್ಜಿ ನೀಡಿದ್ದು ಗ್ರಾಮ ಪಂಚಾಯ್ತಿಯವರು ಹಿಂಬರಹ ನೀಡಿದ ಮೇಲೆ ನಾನು ಇ ಓ ರವರ ಬಳಿ ಮನವಿ ಸಲ್ಲಿಸಿರುತ್ತೇನೆಂದರೆ ಸರಿ. ಗ್ರಾಮ ಪಂಚಾಯ್ತಿಗೆ ಅರ್ಜಿ ಸಲ್ಲಿಸಿದ ಸಮಯದಲ್ಲಿ ದಾವಾಸ್ತಿಯಲ್ಲಿ ಗುಡಿಸಲು ಇತ್ತು. ಅರ್ಜಿಯ ಜೊತೆ ಆಸ್ತಿಯ ವಾಸ್ತವಿಕೆಯ ಬಗೆಗ ಫೋಟೋಗಳನ್ನು ಕೊಟ್ಟಿರಲಿಲ್ಲ. ಆ ರೀತಿ ಫೋಟೋ ಸಮೇತ ಅರ್ಜಿ ಕೊಡಲು ನಿಮಗೇನೂ ತೊಂದರೆ ಇರಲಿಲ್ಲವೆಂದರೆ ಅವರೇನೂ ಕೇಳಲಿಲ್ಲ ಅದಕ್ಕಾಗಿ ಕೊಡಲಿಲ್ಲವೆನ್ನುತ್ತಾರೆ. ದಾವಾಸ್ತಿಯಲ್ಲಿ ೩೦ ವರ್ಷದಿಂದ ಗುಡಿಸಲು ಹಾಕಿಕೊಂಡಿದ್ದೆ ಅಂತಾ ನನ್ನ ವಾದಪತ್ರದಲ್ಲಿ ಹೇಳಿ ಬರೆಸಿಲ್ಲ. ಆ ರೀತಿ ನನಗೆ ಯಾವುದೇ ತೊಂದರೆ ಇರಲಿಲ್ಲ. ದಾವಾಸ್ತಿಯಲ್ಲಿ ಯಾವುದೇ ಗುರಡಿಸಲು ಇರಲಿಲ್ಲವಾದ್ದರಿಂದ ನಾನು ಆ ವಿಚಾರವನ್ನು ನಾನು ಎಲ್ಲಿಯೂ ಹೇಳಿರುವುದಿಲ್ಲವೆಂದರೆ ಸರಿಯಲ್ಲ.

ಗುಡಿಸಲನ್ನು ನಮ್ಮ ಲೆಕ್ಕ ದಾಖಲೆಗಳಲ್ಲಿ ಸೇರಿಸಿ ಕೊಡಿ ಅಂತಾ ನಾವು ಇ ಓ ಅವರ ಮುಂದೆ ಅರ್ಜಿ ನೀಡಿರುತ್ತೇವೆ. ಜಾಗ ಇದೆ ಅಂತಾ ಕೊಟ್ಟಿದ್ದೇನೆ ಮನೆ ಇದೆ ಅಂತಾ ಕೊಟ್ಟಿರಲಿಲ್ಲವೆನ್ನುತ್ತಾರೆ. 2004 ರಲ್ಲಿಯೇ ಪ್ರತಿವಾದಿಯರು ತಮ್ಮ ಆಸ್ತಿಯಲ್ಲಿದ್ದಾರೆ ಲೆಕ್ಕ ದಾಖಲೆಯಲ್ಲಿ ನಮೂದು ಇದೆ ಅಂತಾ ಇ ಓ ರವರು ದಿಃ20-06-2013 ರಂದು ಹಿಂಬರಹ ನೀಡಿರುತ್ತಾರೆಂದರೆ ಸರಿ. ಖರೀದಿ ಪತ್ರದಲ್ಲಿರುವ ನಮ್ಮದೇ ಆಸ್ತಿಯ ಕುರಿತು ಉಪ ನೊಂದಣಿ ಕಚೇರಿಯಿಂದ ಮೌಲ್ಯಮಾಪನ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದೇನೆ. ನಿಪಿ-೯ ರಲ್ಲಿ ಯಾವುದೇ ಆಸ್ತಿ ನಂಬರ್, ಮನೆ ನಂಬರ್, ನಿವೇಶನದ ಯಾವುದೇ ವಿವರಣೆಯು ನಮೂದು ಇಲ್ಲವೆಂದರೆ ಸರಿ. ಉಪ ನೊಂದಣಿ ಕಚೇರಿಯಲ್ಲಿ ಖಾಲಿ ನಿವೇಶನಕ್ಕೆ ಇರುವಂತಹ ಬೆಲೆಯ ಕುರಿತು ಮತ್ತು ಕಟ್ಟಡ ಇರುವಂತಹ ಆಸ್ತಿಯ ಮೌಲ್ಯದ ಕುರಿತು ಮತ್ತು ಭೂ ಪರಿವರ್ತನೆಯಾದ ಜಮೀನುಗಳ ಕುರಿತು, ಪ್ರತ್ಯೇಕವಾಗಿ ಮೌಲ್ಯಮಾಪನ ಪಟ್ಟಿ ಕೊಡುತ್ತಾರೆಂದರೆ ಸರಿ ಅದೇ ರೀತಿ ಆಸ್ತಿಯಲ್ಲಿ ಗುಡಡಿಸಲಿದ್ದರೆ ಅದಕ್ಕೆ ಪ್ರತ್ಯೇಕವಾಗಿ ಮೌಲ್ಯಮಾಪನ ಪ್ರತಿ ನೀಡುತ್ತಾರೆಂದರೆ ನನಗೆ ಗೊತ್ತಿಲ್ಲ. ನಿಪಿ-೯ ಮೌಲ್ಯಮಾಪನ ಪ್ರತಿ ತಪ್ಪಿನಿಂದ ಕೂಡಿತ್ತು ಎಂದರೆ ಸರಿಯಲ್ಲ. ಆ ಕಾರಣದಿಂದಾಗಿ ನಾನು ನ್ಯಾಯಾಲಯಕ್ಕೆ ಸೂಕ್ತವಾದ ಶುಲ್ಕವನ್ನು ತುಂಬದೇ ಇರುವುದರಿಂದ ಈ ದಾವೆಯು ಊರ್ಜಿತವಾಗುವುದಿಲ್ಲವೆಂದರೆ ಸರಿಯಲ್ಲ.

ಮೂಲ ದಾವಾ ಸಂಖ್ಯೆ. 143/2013 ಪಿ ಡಬ್ಲ್ಯೂ 1

ನಿಪಿ-15 ರಲ್ಲಿ ಕಾಣುವ ಸಾರ್ವಜನಿಕ ರಸ್ತೆಯು ಪ್ರತಿವಾದಿಯ ಆಸ್ತಿಯ ಪಶ್ಚಿಮದಿಕ್ಕಿಗೆ ಇರುವ ಸಾರ್ವಜನಿಕ ರಸ್ತೆ ಎಂದರೆ ಸರಿ. ನಿಪಿ-20 ರಲ್ಲಿ ಒಂದು ಟ್ರ್ಯಾಕ್ಟರ್ ಇಂಜಿನ್ ಕಾಣುತ್ತದೆಂದರೆ ಸಾಕ್ಷಿಯು ಫೋಟೋ ನೋಡಿ ಅದು ಪ್ರತಿವಾದಿಯರ ಜಾಗ ಅದರಲ್ಲಿ ಟ್ರ್ಯಾಕ್ಟರ್ ಇರುವುದು ಕಾಣುತ್ತದೆನ್ನುತ್ತಾರೆ. ಸದರಿ ಟ್ರ್ಯಾಕ್ಟರ್ ಸುಮಾರು 20-25 ವರ್ಷದಿಂದ ಅದೇ ಜಾಗದಲ್ಲಿ ನಿಂತಿದೆ ಎಂದರೆ ಸರಿಯಲ್ಲ. ನಿಪಿ-21 ರಲ್ಲಿ ಒಂದು ಟ್ರ್ಯಾಕ್ಟರ್ ಟ್ರ್ಯಾಲಿ ಕಾಣುತ್ತದೆಂದರೆ ಸಾಕ್ಷಿಯು ಅಲ್ಲಿ ಟ್ರ್ಯಾಲಿ ನಿಲ್ಲಿಸಿರಬಹುದು ಆದರೆ ಅದು ನಮ್ಮ ಜಾಗವೆನ್ನುತ್ತಾರೆ. ಸದರಿ ಜಾಗ ನನ್ನದೇ ಅಂತಾ ತೋರಿಸಲು ನೊಂದಾಯಿತ ಕ್ರಯಪತ್ರ, ಪಾಲು ವಿಭಾಗ ಪತ್ರ ಹಾಜರುಪಡಿಸಿದ್ದೇನೆ. ಸದರಿ ನಾನು ಹಾಜರುಪಡಿಸಿದ ದಾಖಲೆಗಳು ನಿಪಿ-21 ರಲ್ಲಿರುವ ಆಸ್ತಿಗೆ ಸಂಬಂಧಿಸಿದ ದಾಖಲೆಗಳು ಇರುವುದಿಲ್ಲವೆಂದರೆ ಸರಿಯಲ್ಲ. ನಿಪಿ-26 ರಲ್ಲಿ ಪ್ರತಿವಾದಿಯರು ಹಾಕಿರುವ ಮೆಕ್ಕೇಜೋಳದ ರಾಶಿ ಇದೆ ಎಂದರೆ ಸಾಕ್ಷಿಯು ಅವರು ಅದನ್ನು ಅತಿಕ್ರಮಣ ಮಾಡಿ ಹಾಕಿದ್ದಾರೆನ್ನುತ್ತಾರೆ. ಪ್ರತಿವಾದಿಯರು ನನ್ನ ಆಸ್ತಿಯಲ್ಲಿ ಅತಿಕ್ರಮಣ ಮಾಡಿ ಈ ರೀತಿ ಮೆಕ್ಕೇಜೋಳ ಹಾಕಿದ್ದಾರಂತಾ ಏನಾದರೂ ದೂರು ಅಥವಾ ಸಂಬಂಧಿಸಿದ ಇಲಾಖೆಗೆ ಅರ್ಜಿ ನೀಡಿದ್ದೀರಾ ಎಂದರೆ ಸಾಕ್ಷಿಯು ನಾನು ನ್ಯಾಯಾಲಯಕ್ಕೆ ದಾವೆ ದಾಖಲಿಸಿದ್ದೇನೆ ಎನ್ನುತ್ತಾರೆ.

ದಾವಾಸ್ತಿಯನ್ನು ಪ್ರತಿವಾದಿಯರ ವಂಶಸ್ಥರು ಆಗಿರುವಂತಹ ಆನಂದದೇವನಹಳ್ಳಿ ಚನ್ನಬಸಪ್ಪನ ಮಕ್ಕಳಾದ ಗುರುಬಸಪ್ಪ ಮತ್ತು ಬುಳ್ಳಪ್ಪ ಇವರು ದಿಃ28-10-1884 ರಂದು ಖರೀದಿಸಿರುವ ಆಸ್ತಿಯಾಗಿರುತ್ತದೆಂದರೆ ಸುಳ್ಳು. ಸದರಿ ಖರೀದಿ ಪತ್ರದಂತೆ ಆಸ್ತಿಯ ಚಕ್ಕುಬಂದಿ ಪೂಃ ಅಣ್ಣಿ ವೀರಪ್ಪರ ಮನೆ, ಪಃ ರಸ್ತೆ, ಉಃ ಮುದುಕಪ್ಪನ ಕಣ, ದಃ ಕೊಬ್ಬಜ್ಜಿ ಬಾಡಪ್ಪನ ಕಣ ಈ ಚಕ್ಕುಬಂದಿ ಮಧ್ಯದ ಆಸ್ತಿಯನ್ನು ಪ್ರತಿವಾದಿಯ ಹಿರಿಯರು ಖರೀದಿ ಮಾಡಿದರೆಂದರೆ ಸುಳ್ಳು. ಸದರಿ ಚಕ್ಕುಬಂದಿ ಈಗ ಪೂಃ ಲಂಗಟರ ಫೋರಮ್ಮ ಎಂದರೆ ಸರಿ. ಪಃ ರಸ್ತೆ ಎಂದರೆ ಸರಿ, ಉಃಉಳಿಮಜ್ಜಿಗಿ ಬಸಪ್ಪ ಈತ ಹಳ್ಳಿ ಮಲ್ಲಪ್ಪಗೆ ಮಾರಾಟ ಮಾಡಿದ್ದಾರೆಂದರೆ ಸರಿ ಸಾಕ್ಷಿ ಮುಂದುವರೆದು ಉಳಿಮಜ್ಜಿಗಿ ಇವರ ಜಾಗ ನನ್ನ ಆಸ್ತಿಯ ಉತ್ತರಕ್ಕೆ ಇದೆ ಎನ್ನುತ್ತಾರೆ ಹಾಗೂ ದಃಕೊಬ್ಬಜ್ಜಿ ಸುಭಾಕರಪ್ಪ ಇವರ ಆಸ್ತಿ ಇದೆ ಎಂದರೆ ಸಾಕ್ಷಿಯು ಆ ಚಕ್ಕುಬಂದಿಯು ನನ್ನ ಆಸ್ತಿಗೆ ಇರುವುದಿಲ್ಲವೆನ್ನುತ್ತಾರೆ. ಪ್ರತಿವಾದಿಯರ ಆಸ್ತಿಯ ದಕ್ಷಿಣಕ್ಕೆ ಕೊಬ್ಬಜ್ಜಿ ಸುಭಾಕರಪ್ಪ ಇವರ ಆಸ್ತಿ ಇದೆ ಎಂದರೆ ಸರಿ. ಮೇಲೆ ಹೇಳಿದ ಚಕ್ಕುಬಂದಿ ಮಧ್ಯದಲ್ಲಿರುವ ಆಸ್ತಿ ಪ್ರತಿವಾದಿಯರ ಆಸ್ತಿ ಎಂದರೆ ಸರಿ. ಸದರಿ ಚಕ್ಕುಬಂದಿ ಮಧ್ಯದಲ್ಲಿರುವ ಆಸ್ತಿಯು 2004 ರಲ್ಲಿ ಮೋರಿಗೇರಿ ಗ್ರಾಮ ಪಂಚಾಯ್ತಿಯ ಸಾಮಾನ್ಯ ಸಭೆಯಲ್ಲಿ ನನ್ನ ಹಾಜರಾತಿಯಲ್ಲಿ ಆನಂದದೇವನಹಳ್ಳಿ ಪತ್ರಿಬಸಮ್ಮ

ಇವರ ಹೆಸರಿಗೆ ಹಕ್ಕು ದಾಖಲೆಯಲ್ಲಿ ನಮೂದಾಯಿತು ಎಂದರೆ ಸಾಕ್ಷಿಯು ತಮ್ಮ ಜಾಗವನ್ನು ಅಷ್ಟೆ ಮಾಡಿಕೊಂಡಿದ್ದಾರೆನ್ನುತ್ತಾರೆ. ಸದರಿ ಆಸ್ತಿಗೆ ಗ್ರಾಮ ಪಂಚಾಯ್ತಿಯವರು ವಾರ್ಡ ನಂ.6, ಮನೆ ನಂ.272 ಎಂದು ಕೊಟ್ಟಿರುತ್ತಾರೆಂದರೆ ಸರಿ. ಸದರಿ ಆಸ್ತಿಗೆ ಅವರು ಕಂದಾಯವನ್ನು ನಿರಂತರವಾಗಿ ಕಟ್ಟಿಕೊಂಡು ಬಂದಿರುತ್ತಾರೆಂದರೆ ಸರಿ. ದಾವಾಸ್ತಿಗೆ ಕಂದಾಯವನ್ನು ಪಾವತಿಸಿಲ್ಲ. ದಾವಾಸ್ತಿಯು ನನ್ನದು ಆಗದೇ ಇರುವುದರಿಂದ ನಾನು ಸದರಿ ಆಸ್ತಿಗೆ ಕಂದಾಯ ಕಟ್ಟಿರುವುದಿಲ್ಲವೆಂದರೆ ಸರಿಯಲ್ಲ. ಪತ್ರಿ ಬಸಮ್ಮ ಇವರ ಮರಣದ ನಂತರ ಅವರ ಹೆಸರಿಗೆ ಇದ್ದ ಮೇಲ್ಕಂಡ ಆಸ್ತಿ 1ನೇ ಪ್ರತಿವಾದಿ ಇವರ ಹೆಸರಿಗೆ ಸನ್ 2012 ರಲ್ಲಿ ದಾಖಲಾಯಿತು ಎಂದರೆ ಆಗಿರಬಹುದು. ಸದರಿ ಆಸ್ತಿಯು ಬಸಮ್ಮ ಇವರ ಹಸೆರಿಗೆ ದಾಖಲಾಗುವ ಸಮಯದಲ್ಲಿ ಅಥವಾ ಅವರ ಮರಣದ ನಂತರ 1ನೇ ಪ್ರತಿವಾದಿಯ ಹೆಸರಿಗೆ ದಾಖಲಾಗುವ ಸಮಯದಲ್ಲಿ ನಿವೇನಾದರೂ ತಕರಾರು ಮಾಡಿದ್ರಾ ಎಂದರೆ ಸಾಕ್ಷಿಯು ಪಂಚಾಯ್ತಿಯವರು ನಮಗೆ ನೋಟೀಸ ಕೊಟ್ಟಿಲ್ಲ ಅದರಿಂದ ತಕರಾರು ಮಾಡಿಲ್ಲವೆನ್ನುತ್ತಾರೆ. ಯಾವುದೇ ಒಂದು ದಾಖಲೆ ಬದಲಾವಣೆ ಕುರಿತು ಪಂಚಾಯ್ತಿಯವರು ಸಾರ್ವಜನಿಕ ನೋಟಿಸಿನ ಮೂಲಕ ಪ್ರಕಟಣೆ ಮಾಡುತ್ತಾರೆಂದರೆ ಸರಿ. ಆ ಕಾರಣದಿಂದ ಪ್ರತಿಯೋಬ್ಬ ವ್ಯಕ್ತಿಗೂ ವೈಯಕ್ತಿಕವಾಗಿ ನೋಟೀಸನ್ನು ಕೊಡುವುದಿಲ್ಲವೆಂದರೆ ನನಗೆ ಅದರ ಬಗ್ಗೆ ಮಾಹಿತಿ ಇಲ್ಲವೆನ್ನುತ್ತಾರೆ.

ಪತ್ರಿ ಬಸಮ್ಮ ಇವರ ಹೆಸರಿಗೆ ಆದ ಖಾತೆಯ ಕುರಿತು ಅಥವಾ 1ನೇ ಪ್ರ2ವಾದಿಯ ಹೆಸರಿಗೆ ಖಾತೆಯಾದ ಕುರಿತು ನೀವು ಸೂಕ್ತ ಪ್ರಾಧಿಕಾರದ ಮುಂದೆ ಮೇಲ್ಮನವಿ ಏನಾದರೂ ಸಲ್ಲಿಸಿದ್ದೀರಾ ಎಂದರೆ ಇಲ್ಲ. ನನಗೆ ಅಲ್ಲಿ ಯಾವುದೇ ಆಸ್ತಿ ಇಲ್ಲದೇ ಇರುವುದರಿಂದ ಪಂಚಾಯ್ತಿಯವರು ನನಗೆ ನೋಟೀಸು ಕೊಡುವ ಪ್ರಶ್ನೆ ಬರುವುದಿಲ್ಲ ಮತ್ತು ನಾನು ಯಾವುದೇ ಮೇಲ್ಮನವಿಯನ್ನು ಸಲ್ಲಿಸಿಲ್ಲವೆಂದರೆ ಸರಿಯಲ್ಲ.

ಸದರಿ ಆಸ್ತಿಯು 1ನೇ ಪ್ರತಿವಾದಿಯಿಂದ 6ನೇ ಪ್ರತಿವಾದಿಗೆ ದಾನಪತ್ರದ ಮೂಲಕ ವರ್ಗಾವಣೆಯಾಯಿತು ಆ ಸಮಯದಲ್ಲಿ ಏನಾದರೂ ಪ್ರಶ್ನಿಸಿದ್ರಾ ಎಂದರೆ ಇಲ್ಲ. ದಾವಾಸ್ತಿಯಲ್ಲಿ ಪ್ರತಿವಾದಿಯರ ತಗಡಿನ ಮನೆ ಹಾಕಿಕೊಂಡು ಕೃಷಿ ಉಪಕರಣಗಳನ್ನು ಇಟ್ಟುಕೊಂಡು ತಾತ್ಕಾಲಿಕ ಧನದ ಕೊಟ್ಟಿಗೆಯನ್ನು ಹಾಕಿಕೊಂಡು ಅದರ ಸಾವಧೀನದಲ್ಲಿರುತ್ತಾರೆಂದರೆ ಸರಿ. ಅದೇ ರೀತಿ ಅವರು ವಿದ್ಯುತ್ ಸಂಪರ್ಕ ಪಡೆದಿದ್ದಾರೆಂದರೆ ಸಾಕ್ಷಿಯು ಅವರ ಮನೆಗೆ ಪಡೆದಿದ್ದಾರೆ ಬಯಲು ಜಾಗಕ್ಕೆ ಇಲ್ಲವೆನ್ನುತ್ತಾರೆ.

ಸನ್ 2015 ರಲ್ಲಿ ಭಾರಿ ಮಳೆ ಮತ್ತು ಗಾಳಿಯಿಂದ ಮನೆಗಳಿಗೆ ಸಾಕಷ್ಟು ಹಾನಿಯಾಯಿತು ಎಂದರೆ ಸರಿ. ಸಾಕ್ಷಿ ಮುಂದುವರೆದು ಆ ಸಮಯದಲ್ಲಿ ಪ್ರತಿವಾದಿಯರ ಮನೆಯ ಛಾವಣಿ ಸಹಾ ಹಾರಿಹೋಗಿತ್ತು ಎನ್ನುತ್ತಾರೆ. ಅದಕ್ಕೆ ಸಂಬಂಧಿಸಿದಂತೆ 6 ನೇ ಪ್ರತಿವಾದಿಯು ಮಾನ್ಯ ತಹಶೀಲ್ದಾರ್ ಸಮ್ಮುಖದಲ್ಲಿ ಪರಿಹಾರಕ್ಕಾಗಿ ಅಶಜಿ ಸಲ್ಲಿಸಿದ್ದು ಅದಕ್ಕೆ ಅವರಿಗೆ ಪರಿಹಾರ ಮಂಜೂರಾಯಿತು ಎಂದರೆ ಅವರ ಮನೆಗೆ ಆಗಿರಬಹುದು ಎನ್ನುತ್ತಾರೆ. ದಾವಾಸ್ತಿಯಲ್ಲಿ ಪ್ರತಿವಾದಿಯರು ತಮ್ಮ ಮನೆಗೆ ನೀರಿನ ಸಂಪರ್ಕ ಪಡೆದು ನೀರಿನ ನಳ ಸಹಾ ಇದೆ ಎಂದರೆ ಸಾಕ್ಷಿ ಅವರ ಮನೆಗೆ ಇದೆ ಎನ್ನುತ್ತಾರೆ. ಪ್ರತಿವಾದಿಯರು ಈ ಮೇಲೆ ಹೇಳಿದ ಆಸ್ತಿಯಲ್ಲಿ ಮಾಡಿದ ವ್ಯವಹಾರಗಳಿಗೆ ನೀವು ಯಾವುದೇ ರೀತಿಯಿಂದ ತಕರಾರು ಮಾಡಿಲ್ಲವೆಂದರೆ ಸಾಕ್ಷಿಯು ಅವರ ಜಾಗದಲ್ಲಿ ಅವರು ಮಾಡಿದ್ದಾರೆ ನಮ್ಮ ಜಾಗದಲ್ಲಿ ಏನೂ ಮಾಡಿಲ್ಲವೆನ್ನುತ್ತಾರೆ.

ದಿಃ 28-11-2012 ರಂದು ಗ್ರಾಮ ಪಂಚಾಯ್ತಿಗೆ ಖಾತೆ ಬದಲಾವಣೆ ಕುರಿತು ನಾನು ಅರ್ಜಿ ನೀಡಿದಾಗ ದಿಃ29-11-2012 ರಂದು ಪ್ರತಿವಾದಿಯರು ತಕರಾರು ನೀಡಿರುತ್ತಾರೆಂದರೆ ಸರಿ. ದಾವಾ ಸ್ವತ್ತಿನಲ್ಲಿ ಪ್ರತಿವಾದಿಯರು ಸ್ವಾಧೀನದಲ್ಲಿರುವುದನ್ನು ಪಂಚಾಯ್ತಿಯವರು ಖಾತರಿಪಡಿಸಿಕೊಂಡು ಪ್ರತಿವಾದಿಯರು ತಕರಾರು ಕೊಟ್ಟ ಕಾರಣಕ್ಕಾಗಿ ನಾನು ನೀಡಿದ ಅರ್ಜಿಯನ್ನು ತಿರಸ್ಕರಿಸಿರುತ್ತಾರೆಂದರೆ ಸರಿಯಲ್ಲ.

ಮಳೆ ಮಲ್ಲೇಶ್ವರ ದೇವಸ್ಥಾನದ ಪಾದುಗಟ್ಟೆ ಹತ್ತಿರ ಎಂ ಎಸ್ ಐ ಎಲ್ ಮಧ್ಯದ ಅಂಗಡಿ ಇದೆ ಎಂದರೆ ಸರಿ. ಸದರಿ ಎಂ ಎಸ್ ಐ ಎಲ್ ಗೆ ನಮಗೆ ಸಂಬಂಧವಿಲ್ಲ. ಪ್ರತಿವಾದಿಯರು ಒಂದು ರಾಜಕೀಯ ಪಕ್ಷಕ್ಕೆ ಮತ್ತು ನಾನು ಒಂದು ರಾಜಕೀಯ ಪಕ್ಷಕ್ಕೆ ಸೇರಿದವರು ಇರುತ್ತೇವೆಂದರೆ ಸರಿ. ನಾನು ಎ ಪಿ ಎಂ ಸಿ ಚುನಾವಣೆಯಲ್ಲಿ ನಿಂತು ಸೋತಿರುತ್ತೇನೆಂದರೆ ಸರಿ. ಅದಕ್ಕೆ ಪ್ರತಿವಾದಿಯರೇ ಕಾರಣ ಅಂತಾ ನಾನು ಆಪಾದಿಸಿರುತ್ತೇನೆಂದರೆ ಸರಿ. 6 ನೇ ಪ್ರತಿವಾದಿಯರು

ತಾಲ್ಲೂಕು ಪಂಚಾಯ್ತಿಗೆ ಸ್ಪರ್ಧೆ ಮಾಡಿರುತ್ತಾರೆಂದರೆ ಸರಿ. ಆಗ ನಾನು ಸ್ವತಂತ್ರ್ಯ ಅಭ್ಯರ್ಥಿಗಳ ಮೂಲಕ 6 ನೇ ಪ್ರತಿವಾದಿಗೆ ಸೋಲಿಸಿರುತ್ತೇನೆಂದರೆ ಸರಿ.

ಸನ್ 2014 ರಿಂದ 2020 ರವರಗೆ ವಿ ಎಸ್ ಎಸ್ ಕೆ ಎನ್ ಗೆ ಅಧ್ಯಕ್ಷನಾಗಿದ್ದೆ ಎಂದರೆ ಸರಿ. ಸನ್ 2020 ರಿಂದ 2025 ರವರೆಗೆ ನಿರ್ದೇಶಕನಾಗಿದ್ದೆ ಎಂದರೆ ಸರಿ. ದಾವಾಸ್ತಿಯು ನನ್ನದು ಆಗದೇ ಇದ್ದರೂ ಸಹಾ ಅದನ್ನು ಕಬಳಿಸುವ ಉದ್ದೇಶದಿಂದ ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷಿ ಪ್ರಮಾಣತ್ರ ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ